ವಿಮರ್ಶಕ **ಬಸವರಾಜ ಕಲ್ಗುಡಿ**
ಅವರೊಂದಿಗೆ ಸಾಹಿತ್ಯ ಸಂವಾದ

ಸಂದರ್ಶನ:
**ವಿಕ್ರಂ ವಿಸಾಜಿ**
ಚಿತ್ರಗಳು: ಸಿದ್ದು ಶೆಟ್ಟರ್

# 'ಸೂಕ್ಷ್ಮಜ್ಞರನ್ನು ಬೆಳೆಸುವುದು ಸಂಸ್ಕೃತಿಯ ಜವಾಬ್ದಾರಿ

ಕನ್ನಡದ ಬಹುಮುಖಿ ವಿಮರ್ಶಕ ಬಸವರಾಜ ಕಲ್ಗುಡಿ (1956) ಅವರು ಹುಟ್ಟಿದ್ದು ಬೆಳಗಾವಿಯಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ನಿವೃತ್ತರಾದರು. ತಮ್ಮ ಪಾಠ, ಸಂಶೋಧನೆ, ಆಡಳಿತ ಮತ್ತು ವಿದ್ವತ್ತಿನ ಮೂಲಕ ಕನ್ನಡ ಅಧ್ಯಯನ ಸಂಸ್ಥೆಯ ಗರಿಮೆಯನ್ನು ಹೆಚ್ಚಿಸಿದವರು. ಹಾಗೆಯೇ, ಕನ್ನಡ ವಿಮರ್ಶೆಯಲ್ಲಿ ತಮ್ಮ ಅಪರೂಪದ ಒಳನೋಟಗಳಿಂದ ಸಾಹಿತ್ಯದ ಓದುಗರ ಗಮನ ಸೆಳೆದವರು. ಬರೆದದ್ದು ಕಡಿಮೆ. ಆದರೆ, ಅವರು ಬರೆದ ಎಲ್ಲ ಬರಹಗಳೂ ಕನ್ನಡ ಚಿಂತನಾ ವಲಯ ಮತ್ತೆ ಮತ್ತೆ ಎದುರುಗೊಳ್ಳಲೇಬೇಕಾದಂತಹವು. 'ಮಹಾಸತಿ ಆಚರಣೆ', 'ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ', 'ನಕ್ಷೆ ನಕ್ಷತ್ರ', 'ಮೈಯೇ ಸೂರು ಮನವೇ ಮಾತು' ಅವರ ಮಹತ್ವದ ಕೃತಿಗಳು. ಅವರು ಮಾಡಿರುವ ಸಂಪಾದನೆಗಳು ಮುಖ್ಯವಾಗಿವೆ. ಶಾಸನಾಧ್ಯಯನ, ಸಂಶೋಧನೆ, ಸಾಹಿತ್ಯಾಧ್ಯಯನ, ವಿಮರ್ಶೆ, ಸಂಸ್ಕೃತಿ ಚಿಂತನೆಯಂಥ ಹಲವು ದಾರಿಗಳಲ್ಲಿ ಬಹುದೂರ ಕ್ರಮಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಿ.ಎಸ್. ಶಿವರುದ್ರಪ್ಪ ವಿಶ್ವಸ್ಥ ಮಂಡಳಿ ಪ್ರಶಸ್ತಿ ಮತ್ತು ಇನ್ನಿತರ ಗೌರವಗಳಿಗೆ ಪಾತ್ರರಾಗಿದ್ದಾರೆ. ಕಳೆದ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಕಲ್ಗುಡಿ ಅವರು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಶಾಸ್ತ್ರೀಯ ಅಧ್ಯಯನ ಕೇಂದ್ರದ ಸಭೆಯಲ್ಲಿ ಭಾಗವಹಿಸಲು ಕಲಬುರಗಿಗೆ ಬಂದಿದ್ದರು. ಆ ಸಂದರ್ಭದಲ್ಲಿ ಈ ಸಂದರ್ಶನವನ್ನು ವಿಶ್ವವಿದ್ಯಾಲಯದ ಕಾರ್ಯಸೌಧದ ಸಭಾಂಗಣದಲ್ಲಿ ಸಂಜೆ ನಡೆಸಲಾಯಿತು. ಹೊರಗಡೆ ಬೀಳುತ್ತಿದ್ದ ಮಳೆಯಿಂದಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ತಂಪು ವಾತಾವರಣವಿತ್ತು, ಸಭಾಂಗಣದ ಒಳಗೆ ನಡೆದ ಆಪ್ತ, ಗಂಭೀರ ಸಂವಾದ ಇಲ್ಲಿದೆ.

◆ **ನಿಮ್ಮ ಸಂಶೋಧನಾ ಜೀವನದ ಆರಂಭದಲ್ಲಿ ಮಹಾಸತಿ ಆಚರಣೆ ಕುರಿತು ಅಧ್ಯಯನ ಮಾಡಿದ್ರಿ. ಕರ್ನಾಟಕದಲ್ಲಿ ನಡೆದ ಈ ಸತಿ ಆಚರಣೆ, ಮನುಷ್ಯರ ಬಲಿ ಪದ್ಧತಿಗಳು ಯಾಕೆ ನಿಮ್ಮ ಆಸಕ್ತಿಯ ಕ್ಷೇತ್ರಗಳಾದವು? ಇವುಗಳಿಂದ ಪಡೆದುಕೊಂಡ ತಿಳಿವಳಿಕೆ ಮುಂದೆ ನಿಮ್ಮ ಒಟ್ಟಾರೆ ಅಧ್ಯಯನಕ್ಕೆ ಹೇಗೆ ನೆರವಾಯಿತು?**

ಮಹಾಸತಿ ಆಚರಣೆ ಕುರಿತು ಇಂಡಿಯಾದ ತುಂಬಾ ಅನೇಕ ಅಧ್ಯಯನಗಳಾಗಿವೆ. ಬಲಿ ಅನಿವಾರ್ಯವಾದಂಥ ಕ್ರಿಯೆ ಅನ್ನೊ ನಂಬಿಕೆ ಹುಟ್ಟಿಸಲಾಗಿತ್ತು. ಅಲ್ತೇಕರ್ ಕೂಡ ಒಂದು ಪುಸ್ತಕ ಬರೆದಿದ್ದಾರೆ. ಬಹಳ ದೊಡ್ಡ ವಾದ ಮಂಡಿಸಿದ್ದಾರೆ. ಅವರು ಬಹಳ ದೊಡ್ಡ ವಿದ್ವಾಂಸರು. 'ದಿ